**<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ನ್ಯಾಯಾಲಯ, ಕಾರವಾರ</u>**

ಸಿ.ಸಿ. ನಂಃ 2853/2024

ಸಿ ಡಬ್ಲೂಃ 2

ಪಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರು : ಶುಭಂ ಸುರೇಶ್ ಪವಾರ್

ತಂದೆಯ ಹೆಸರು : ಸುರೇಶ್ ಪವಾರ್

ವಯಸ್ಸು : 30 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಶಿರವಾಡ , ಕಾರವಾರ

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 12-03-2026**

**<u>ಮುಖ್ಯ ವಿಚಾರಣೆಃ ಹಿರಿಯ ಸ ಸ ಅ ರವರಿಂದಃ</u>**

ನನಗೆ ಪೋಲಿಸರು ಪಂಚನಾಮೆಗೆ ಅಂತಾ ಕರೆದಿದ್ದರು. ನಾನು ಆರೋಪಿಯ ಮನೆ ಬಳಿ ಹೋಗಿದ್ದೆ. ವಿಡಿಯೋ ಮಾಡಿ ಪೋಟೋ ತೆಗೆದಿರುತ್ತಾರೆ. ಅಲ್ಲಿ 6 ಬಾಟಲಿ ಲೈಟ್ ಹಾರ್ಸ್ ಮತ್ತು ಗೋವಾ ಪೆನ್ನಿ ಇದ್ದವು. ಸಾಕ್ಷಿ ನಿಪಿ-1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿಕೊಂಡಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಅಂತಾ ಗುರುತಿಸಲಾಯಿತು. ಅದೇ ರೀತಿ ನಿಪಿ-3 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿಕೊಂಡಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಅಂತಾ ಗುರುತಿಸಲಾಯಿತು. ಸಾಕ್ಷಿ ನಿಪಿ-5 ಛಾಯ ಚಿತ್ರವನ್ನು ನೋಡಿ ಗುರುತಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುಮಾ-1 ರಿಂದ 5 ಬಾಟಲಿಗಳನ್ನು ಹಾಗೂ ಚೀಲ ಮತ್ತು ಚೀಲದ ಮೇಲೆ ಅಂಟಿಸಿರುವ ಚೀಟಿಯನ್ನು ನೋಡಿ ಗುರುತಿಸಿರುತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ ಸ ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನಿಪಿ-1 ಕ್ಕೆ ನೀವು ಸಹಿಯನ್ನು ದಿನಾಂಕ 05-10-2024 ರಂದು ಮಾಡಿರುತ್ತೀರಿ ಎಂದರೆ ಸರಿ. ಆರೋಪಿಯ ಮನೆ ಶಿರವಾಡ ಗ್ರಾಮದ ಇಂಡಸ್ಟ್ರೀಯಲ್ ಏರಿಯಾದಲ್ಲಿ ಇದೆ ಎಂದರೆ ಸರಿ. ಆರೋಪಿ ಅಕ್ರಮ ಗೋವಾ ರಾಜ್ಯದ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದಾರೆ ಹಾಗೂ ಆ ಕಾರಣಕ್ಕಾಗಿ ಪಂಚನಾಮೆಗೆ ಬರುವಂತೆ ಪೋಲಿಸರು ನಿಮಗೆ ನಿಪಿ-3 ರಂತೆ ನೋಟಿಸು ನೀಡಿದ್ದರು ಎಂದರೆ ಸರಿ. ಪೋಲಿಸರು ಆರೋಪಿಯನ್ನು ಆ ಬಗ್ಗೆ ವಿಚಾರಿಸಿದಾಗ ಆರೋಪಿ ಅಕ್ರಮವಾಗಿ ಗೋವಾ ಸಾರಾಯಿಯನ್ನು ಮಾರಾಟ ಮಾಡುತ್ತಿರುವುದು ಹೌದು ಅಂತಾ ಒಪ್ಪಿಕೊಂಡಿದ್ದು ಅದಕ್ಕೆ ಸಂಬಂಧಿಸಿದಂತೆ ಪರವಾನಿಗೆ ಸಹ ಇಲ್ಲಾ ಅಂತಾ ಹೇಳಿರುತ್ತಾರೆ ಎಂದರೆ ಸರಿ. ನಿಮ್ಮ ಸಮಕ್ಷಮದಲ್ಲಿ ನ್ಯಾಯಾಲಯದ ಮುಂದಿರುವ ಮುಮಾಗಳನ್ನು ರಾತ್ರಿ 7-50 ರಿಂದ 8-22 ರವರೆಗೆ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ನಿಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ನಿಮ್ಮ ಸಂಗಡ ಚಾಸಾ-3 ರವರು ಸಹ ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಪೋಲಿಸ್ ಠಾಣೆಯಲ್ಲಿ ವಿಡಿಯೋ ಮಾಡಿದ ಬಗ್ಗೆ ಇನ್ನೊಂದು ಪಂಚನಾಮೆಯನ್ನು ಜರುಗಿಸಿ ನಿಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದ್ರಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿಕೊಂಡಿರುವ ಕಾರಣ ಪಂಚನಾಮೆಯನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಸಿಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಜಿ ಪಿ ಟಿ ವಕೀಲರಿಂದಃ**

ನಾನು ಶಿರವಾಡದಲ್ಲಿ ಡ್ರೈವಿಂಗ್ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನಾನು ಶಿರವಾಡ ಗ್ರಾಮದಲ್ಲಿ ಡ್ರೈವಿಂಗ್ ಕೆಲಸ ಮಾಡುವ ಕಾರಣ ಕಾರವಾರ ಗ್ರಾಮೀಣ ಠಾಣಾ ವ್ಯಾಪ್ತಿಗೆ ಬರುತ್ತೇನೆ ಎಂದರೆ ಸರಿ. ಕಾರವಾರ ನ್ಯಾಯಾಲಯಗಳಲ್ಲಿ ನನಗೆ ಸಂಬಂಧಿಸಿದಂತೆ ಕೆಲವು ಕ್ರಿಮಿನಲ್ ಮೊಕದ್ದಮೆ ಇವೆ ಎಂದರೆ ಸರಿ. ಈ ದಿನ ಬೆಳಿಗ್ಗೆ ಪೋಲಿಸರು ಬಂದು ಇದೇ ರೀತಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಬೇಕು ಅಂತಾ ಹೇಳಿದ್ದನ್ನು ಕೇಳಿ ನಾನು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಪೋಲಿಸರಿಗೆ ಇದೇ ರೀತಿ

ಪಂಚನಾಮೆಯನ್ನು ಬರೆಯಿರಿ ಅಂತಾ ಹೇಳಿ ನಾನೇನು ಹೇಳಿಲ್ಲ. ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ಎಲ್ಲವನ್ನು ಬರೆದ ನಂತರ ನಿಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಮುಮಾಗಳನ್ನು ಜಪ್ತು ಪಡಿಸಿ ಪಂಚನಾಮೆ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಘಟನಾ ಸ್ಥಳದಲ್ಲಿ ವಿಡಿಯೋ ಮಾಡಿದ್ದಾಗಲೀ , ಪೋಟೋ ತೆಗೆದಿದ್ದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕಾರವಾರ**